# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 18–05–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | **ಅಧಿಕ ಕೌನ್ಸಿಲ್ ಕಾರ್ಯದರ್ಶಿ,** |
| ತೇಜಸ್ವಿನಿ ಎನ್.ರಾಜು – ಸದಸ್ಯರು | **ಸಹಾಯಕ ಆಯುಕ್ತರು** (ಆಸ್ತಿಗಳು), |
| ಸುರೇಶ್. ಹೆಚ್ – ಸದಸ್ಯರು | **ಕಾನೂನು ಅಧಿಕಾರಿ,** |
| ಮುನಿಸ್ವಾಮಿಗೌಡ – ಸದಸ್ಯರು | **ಕಂದಾಯ ಅಧಿಕಾರಿ** (ಶಿವಾಜಿನಗರ), |
| ಆನಂದ್. ವಿ – ಸದಸ್ಯರು | **ಸಹಾಯಕ ಕಾರ್ಯಪಾಲಕ ಅಭಿಯಂತರರು** (ಕೆಂಪೇಗೌಡನಗರ), |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | –– |
| ಕೆ. ಪೂರ್ಣಿಮ – ಸದಸ್ಯರು | –– |
| ಗಂಗಾಂಬಿಕೆ – ಸದಸ್ಯರು | –– |
| ಕ್ವೀನ್‌ಎಲಿಜ಼ೆಬತ್ – ಸದಸ್ಯರು | –– |
| ನೂರ್ ಜಹಾನ್ – ಸದಸ್ಯರು | –– |
| ಟಿ.ಎ. ಗಾಯಿತ್ರಿ – ಸದಸ್ಯರು | –– |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/562/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/89/2000–01, ದಿನಾಂಕ : 28–02–2012 ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ:93, ವಸಂತನಗರ ಮಿಲ್ಲರ್ ಕೆರೆ ಅಂಗಳದಲ್ಲಿ 100X50 ಅಡಿಗಳ ನಿವೇಶನದಲ್ಲಿರುವ 80X40 ಅಡಿಗಳ ಗೋಡೌನ್ ಕಟ್ಟಡವನ್ನು ಕರ್ನಾಟಕ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಮಾಸಿಕ ಬಾಡಿಗೆ ರೂ.925/– ನಂತೆ ದಿನಾಂಕ:09–06–1980 ರಿಂದ 11 ತಿಂಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ತದನಂತರ ದಿನಾಂಕ:01–05–1981 ರಿಂದ 31–07–1999 ರವರೆಗೆ 219 ತಿಂಗಳ ಅವಧಿಗೆ ಅಂದಿನ ಮಾರುಕಟ್ಟೆ ದರದಂತೆ ಮಾಸಿಕ ಗುತ್ತಿಗೆ ರೂ.99,454.50/–ಗಳು ನಿಗದಿಪಡಿಸಿ ದಿನಾಂಕ:14–07–2003 ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ನಿಗದಿಪಡಿಸಿರುವ ಗುತ್ತಿಗೆ ಮೊತ್ತವನ್ನು ಪಾವತಿಸಿದೇ ಸಂಸ್ಥೆಯು ನಷ್ಟದಲ್ಲಿರುವುದಾಗಿ ನಿಗದಿಪಡಿಸಿರುವ ಮೊತ್ತವನ್ನು ಪಾವತಿಸಲು ಶಕ್ತನಾಗಿಲ್ಲವೆಂದು ಗುತ್ತಿಗೆ ಮೊತ್ತವನ್ನು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ.

ಈ ಮಧ್ಯ ಅಧ್ಯಕ್ಷ ಡಾ॥ ಜಗಜೀವನ್ ರಾಮ್ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ:24–01–2012 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ 99 ವರ್ಷಗಳ ಧೀರ್ಘಾವದಿ ಗುತ್ತಿಗೆ ಅಥವಾ ಮಾರುಕಟ್ಟೆ ಬೆಲೆಗೆ ಕ್ರಯಕ್ಕೆ ನೀಡುವಂತೆ ಕೋರಿದ್ದು, ದಿ:25–01–2012 ರಂದು ಆಸ್ತಿ ಶಾಖೆಯಿಂದ ಅಂತರಿಕ ಕಛೇರಿ ಟಿಪ್ಪಣಿ ನೀಡಲಾಗಿದ್ದು. ಸಹ ಕಂದಾಯ ಅಧಿಕಾರಿ(ವಸಂತನಗರ) ರವರು ವರದಿ ಮಾಡಿರುವಂತೆ 100X50 ಅಡಿಗಳ ನಿವೇಶನದಲ್ಲಿ 80X40 ಅಡಿ ಅಳತೆ ಗೋಡೌನ್ ಕಟ್ಟಡ ಹಾಗೂ ಈ ನಿವೇಶನಕ್ಕೆ ಹೊಂದಿಕೊಂಡಂತೆ ಹೆಚ್ಚುವರಿಯಾಗಿ 2 ಭದ್ರತಾ ಕೊಠಡಿ ಶೆಡ್‌ಗಳು ಇದ್ದು, ವಿಸ್ತೀರ್ಣ 25X30 ಚದರ ಅಡಿಗಳಾಗಿದ್ದು, ಒಟ್ಟಾರೆ 5750 ಚದರ ಅಡಿ ಆಗಿರುತ್ತದೆಂದು ಸದರಿ ಜಾಗವನ್ನು ಗುತ್ತಿಗೆ ಅಥವಾ ಕ್ರಯಕ್ಕೆ ಮಾರುಕಟ್ಟೆ ಬೆಲೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನ ಕೋರಿ ಆಸ್ತಿ ಶಾಖೆಗೆ ಕಡತ ಮಂಡಿಸಿರುತ್ತಾರೆ.

ಪ್ರಸಕ್ತ ಮಾರುಕಟ್ಟೆ ದರ ಚದರ ಅಡಿ 1ಕ್ಕೆ ರೂ.4,500/– ವಾಣಿಜ್ಯಕ್ಕೆ ಶೇ.40% ರಷ್ಟು ಸೇರಿಸಿದಾಗ ಚದರ ಅಡಿ 1ಕ್ಕೆ ರೂ. 6,300/–ಗಳು 5750 ಚದರ ಅಡಿಗಳಿಗೆ (5750X6300=3,62,25,000/–) 3,62,25,000/– ರೂಗಳಾಗುತ್ತದೆ. ಸ್ವತ್ತಿನ ಮೌಲ್ಯದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ ರೂ. 36,22,500/–ರೂಗಳು ಮಾಸಿಕ ರೂ. 3,01,875/–ಗಳಾಗುತ್ತದೆ.

ಇದು ರಾಜ್ಯ ಸರ್ಕಾರದ ಸಂಸ್ಥೆಯಾಗಿದ್ದು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ಜನಾಂಗದವರ ಏಳಿಗೆಗಾಗಿ ನಡೆಸಲಾಗುತ್ತಿರುವ ಸಂಸ್ಥೆಯಾಗಿದ್ದು. ಇದಕ್ಕೆ ಮಾಸಿಕ ಗುತ್ತಿಗೆ ರೂ.99,454.50/– ಪೈಸೆ ನಿಗದಿಪಡಿಸಿರುವುದು ಅವೈಜ್ಞಾನಿಕವಾಗಿರುತ್ತದೆ. ಇಂತಹ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಗುತ್ತಿಗೆ ನಿಗದಿಪಡಿಸುವ ಅವಕಾಶ ಇರುವ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ಪತ್ರ ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಮತ್ತು ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಮುಂದಿನ 30 ವರ್ಷಗಳ ಅವಧಿಗೆ ಪ್ರತ್ಯೇಕ ಪ್ರತ್ಯೇಕವಾಗಿ ದರ ನಿಗದಿಪಡಿಸಿ ಗುತ್ತಿಗೆ ನವೀಕರಿಸಲು ಸ್ಥಾಯಿ ಸಮಿತಿಗಳು ಪಾಲಿಕೆ ಸಭೆ ಮುಖಾಂತರ ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 28–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06–03–2012ರ ನಿರ್ಣಯ.

**ಹೆಚ್ಚಿನ ಮಾಹಿತಿಗಾಗಿ ವಿಷಯವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/563/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 23–02–2012 ರಲ್ಲಿ ವಿವರಿಸಿರುವಂತೆ, ಶ್ರೀ ಜಯಚಾಮರಾಜೇಂದ್ರ ಒಡೆಯರ್ ರಸ್ತೆಯಲ್ಲಿ ಶ್ರೀ. ಜಯಚಾಮರಾಜೇಂದ್ರ ಒಡೆಯರ್ ರವರ ಪ್ರತಿಮೆಯನ್ನು ಮತ್ತು ಶ್ರೀ ಕೆಂಗಲ್‌ಹನುಮಂತಯ್ಯ ರಸ್ತೆ (ಡಬಲ್ ರೋಡ್) ಯಲ್ಲಿ ಶ್ರೀ ಕೆಂಗಲ್‌ಹುನುಮಂತಯ್ಯರವರ ಪ್ರತಿಮೆಯನ್ನು ಸ್ಥಾಪಿಸುವ ಕಾಮಗಾರಿಗೆ ರೂ. 10.00 ಲಕ್ಷಗಳಿಗೆ ಪಿ–0190 ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಕಾಮಗಾರಿಗೆ 118–000067 ಜಾಬ್ ಸಂಖ್ಯೆ ನೀಡಲಾಗಿರುತ್ತದೆ. ವಾರ್ಡ್ ಸಂಖ್ಯೆ: 118ರ ನಗರ ಸಭಾ ಸದಸ್ಯರಾದ ಶ್ರೀಮತಿ. ಎ. ಅವ್ವಯ್, ರವರು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮತ್ತು ಶ್ರೀ. ಕೆಂಗಲ್‌ಹನುಮಂತಯ್ಯ ರವರ ಪ್ರತಿಮೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸ್ಥಾಪಿಸಲು ಸೂಚಿಸಿ, ಪ್ರಸ್ತಾವನೆಗಳಿಗೆ ಅಂಗೀಕಾರ ಪಡೆಯಲು ಪಾಲಿಕೆ ಅನುಮತಿಯನ್ನು ಪಡೆಯಲು ಸೂಚಿಸಿರುತ್ತಾರೆ.

| ಪ್ರತಿಮೆ | ಸ್ಥಾಪಿಸಬೇಕಾಗಿರುವ ರಸ್ತೆ ಹೆಸರು | ಗುರುತಿಸಲಾಗಿರುವ ಸ್ಥಳದ ವಿವರ |
|---|---|---|
| ಶ್ರೀ.ಜಯಚಾಮರಾಜೇಂದ್ರ ಒಡೆಯರ್ | ಜಯಚಾಮರಾಜೇಂದ್ರ ಒಡೆಯರ್ ರಸ್ತೆ | 1. ಟೌನ್ ಹಾಲ್ ಮುಂಭಾಗದ ಪಾರ್ಕ್ ಅಥವಾ<br>2. ಟೌನ್ ಹಾಲ್ ಉತ್ತರ ಭಾಗದ ಪಾರ್ಕ್ |
| ಶ್ರೀ. ಕೆಂಗಲ್‌ಹನುಮಂತಯ್ಯ | ಶ್ರೀ. ಕೆಂಗಲ್‌ಹನುಮಂತಯ್ಯ ರಸ್ತೆ | ಕೆ.ಹೆಚ್. ರಸ್ತೆ ಮತ್ತು ಮಿಷನ್ ರಸ್ತೆಗಳು ಕೂಡುವ ಸ್ಥಳದಲ್ಲಿ ಪೆಟ್ರೋಲ್ ಬಂಕ್ ಮುಂಭಾಗದಲ್ಲಿ ಫ್ಲೈಓವರ್ ಕೆಳಭಾಗದಲ್ಲಿ. |

ಸೂಚಿತ ಸ್ಥಳಗಳಲ್ಲಿ ಪ್ರತಿಮೆಗಳನ್ನು ಸ್ಥಾಪಿಸಲು ಕೈಗೊಳ್ಳಬೇಕಾಗಿರುವ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 23–02–2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 06.03.2012ರ ನಿರ್ಣಯ.

**ನಿರ್ಣಯ : ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಪ್ರತಿಮೆಯನ್ನು ಗುರುತಿಸಿರುವ ಸ್ಥಳದಲ್ಲಿ ಸ್ಥಾಪಿಸಲು ಒಪ್ಪಲಾಯಿತು. ಶ್ರೀ ಕೆಂಗಲ್ ಹನುಮಂತಯ್ಯ ರವರ ಪ್ರತಿಮೆಯನ್ನು ಸ್ಥಾಪಿಸಲು ಗುರ್ತಿಸಿರುವ ಸ್ಥಳವು ಸೂಕ್ತವಾಗಿಲ್ಲದೇ ಇರುವುದರಿಂದ ಸೂಕ್ತ ಸ್ಥಳವನ್ನು ಗುರ್ತಿಸುವ ಮಾರ್ಪಾಡಿನೊಂದಿಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ : 06–03–2012ರ ನಿರ್ಣಯವನ್ನು ಒಪ್ಪಿದೆ.**

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/42/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಮುಲೆಅ/ಪಿಆರ್/250/2011–12, ದಿನಾಂಕ : 18.04.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "01–

ಕೌನ್ಸಿಲ್–ಸಾಮಾನ್ಯ ವೆಚ್ಚಗಳು ಪೂಜ್ಯ ಮಹಾಪೌರರ ಉ/ಸದಸ್ಯರ ವಿವೇಚನಾಧೀನಕ್ಕೆ ಒಳಪಟ್ಟು ವೈದ್ಯಕೀಯ ವೆಚ್ಚಗಳು'' ಪಿ 0188 ಗಳಿಗೆ ರೂ.500.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ದಿ:31-01-2011ರ ಪಾಲಿಕೆ ಸಭೆಯ ನಿರ್ಣಯ ವಿಷಯ ಸಂಖ್ಯೆ : 283/2011–12 ರಂತೆ ಮರುಹೊಂದಾಣಿಕೆ ಅನುಮೋದನೆ ನೀಡಿರುವ ಮೊತ್ತ ರೂ.400–00 ಲಕ್ಷ 2011–12ನೇ ಸಾಲಿಗೆ ''ಪೂಜ್ಯ ಮಹಾಪೌರರ ವಿವೇಚನಾಧೀನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು'' ಲೆಕ್ಕಶೀರ್ಷಿಕೆಗೆ ಮಂಜೂರಾದ ಒಟ್ಟು ಅನುದಾನ ರೂ.900.00 ಗಳು ದಿನಾಂಕ : 31–03–2012ರ ಅಂತ್ಯಕ್ಕೆ ಸದರಿ ಮೊತ್ತವು ಪೂರ್ಣವಾಗಿ ವೆಚ್ಚವಾಗಿರುತ್ತದೆ.

ಪೂಜ್ಯ ಮಹಾಪೌರರ ದಿನಾಂಕ : 12–03–2012ರ ಟಿಪ್ಪಣಿ ಪತ್ರದ ಮೇರೆಗೆ 2011–12ನೇ ಸಾಲಿನ ಆರ್ಥಿಕ ವರ್ಷಕ್ಕೆ ರೂ.150.00 ಲಕ್ಷಗಳನ್ನು ಹೆಚ್ಚುವರಿಯಾಗಿ ''ಪೂಜ್ಯ ಮಹಾಪೌರರ ವಿವೇಚನಾಧಿನಕ್ಕೆ ಒಳಪಟ್ಟ ವೈದ್ಯಕೀಯ ಅನುದಾನಗಳು'' ಲೆಕ್ಕಶೀರ್ಷಿಕೆ ಮರುಹೊಂದಾಣಿಕೆ ಮಾಡಿಕೊಂಡು ಬಿಡುಗಡೆ ಮಾಡುವ ವಿಷಯದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 18–04–2012ರ ಟಿಪ್ಪಣಿಯನ್ನು ಒಪ್ಪಿದೆ.**

## ***04]. ವಿಷಯದ ಸಂಖ್ಯೆ :–ತೆಆಸ್ಥಾಸ/43/2012–13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(5ಜಿ)ಪಿಆರ್/206/2009–10, ದಿನಾಂಕ : 05–05–2012 ರಲ್ಲಿ ವಿವರಿಸಿರುವಂತೆ, ವೇತನ ಪರಿಷ್ಕರಣೆ ಮಾಡುವ ಕುರಿತು, ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012, ದಿನಾಂಕ: 21–04–2012ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಅಧಿಕಾರಿ / ನೌಕರರಿಗೆ ದಿನಾಂಕ: 01–04–2012 ರಿಂದ ಜಾರಿಗೆ ಬರುವಂತೆ ಪ್ರಸಕ್ತ ಮುಖ್ಯ ವೇತನ ಶ್ರೇಣಿಯನ್ನು ಈ ಕೆಳಗೆ ನಿರ್ದಿಷ್ಟಪಡಿಸಿರುವಂತೆ ಪರಿಷ್ಕರಿಸಲಾಗಿರುತ್ತದೆ.

| ಪ್ರಸ್ತುತ ವೇತನ ಶ್ರೇಣಿ | ಪರಿಷ್ಕೃತ ವೇತನ ಶ್ರೇಣಿ |
|---|---|
| ರೂ.4800–100–6000–125–6500–150–7100–175–7800–200–8600–225–9500–250–10500–300–12300–350–14400–400–16800–450–19500–525–22650–600–26250–675–30300–750–34800–850–39900 | ರೂ.9600–200–12200–250–13000–300–14200–350–15600–400–17200–450–19000–500–21000–600–24600–700–28800–33600–900–39000–1050–45300–1200–52500–1350–60600–1500–69600–1700–79800 |

ಕಾಲಮಿತಿ ವೇತನ ಬಡ್ತಿ / ಸ್ವಯಂ ಚಾಲಿತ ವೇತನ ಬಡ್ತಿಗಳನ್ನು ಈ ಕೆಳಕಂಡ ಪರಿಷ್ಕರಣೆ ಮಾಡಲಾಗಿರುತ್ತದೆ.

| ಕ್ರ.ಸಂ. | ವೇತನ ಶ್ರೇಣಿ ರೂ. | ಆಯ್ಕೆ ಕಾಲಿಕ ವೇತನ ಶ್ರೇಣಿ ರೂ. |
|---|---|---|
| 01. | 9600–200–12000–250–13000–300–14200–350–14550 | 10400–200–12000–250–13000–300–14200–350–15600–400–16400 |

25 ಲಕ್ಷಕ್ಕೂ ಹೆಚ್ಚು ಮಂದಿ ವಾಸಿಸುವ ಪ್ರದೇಶಗಳಲ್ಲಿ ಶೇ. 25 ರಷ್ಟು ಮನೆ ಬಾಡಿಗೆ ಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ನಗರ ಪರಿಹಾರ ಭತ್ಯೆಯನ್ನು ರೂ. 400–00 ಹಾಗೂ ಸಿ ಮತ್ತು ಡಿ ವೃಂದದ ನೌಕರರುಗಳಿಗೆ ನಗರ ಪರಿಹಾರ ಭತ್ಯೆಯನ್ನು ರೂ. 350–00 ಗಳನ್ನು ಮಂಜೂರು ಮಾಡಲಾಗಿರುತ್ತದೆ.

ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012, ದಿನಾಂಕ: 21–04–2012ರ ಸರ್ಕಾರಿ ಆದೇಶದ ಕ್ರಮ ಸಂಖ್ಯೆ: 12ರಲ್ಲಿ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರಿಗೆ, ವಿಶ್ವ ವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಗೆ ಮತ್ತು ಸ್ಥಳೀಯ ಸಂಸ್ಥೆಗಳ (ಪಟ್ಟಣ) ನೌಕರರಿಗೆ ಪರಿಷ್ಕೃತ ವೇತನ ಶ್ರೇಣಿಗಳ ಪ್ರಯೋಜನಗಳ ವಿಸ್ತರಣೆ ಮಾಡಲಾಗಿರುತ್ತದೆ.

ವೇತನ ಪರಿಷ್ಕರಣೆ ಮಾಡಿರುವ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012, ದಿನಾಂಕ: 21-04-2012ರ ಸರ್ಕಾರದ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಲೆಕ್ಕಾಧಿಕಾರಿಗಳ ಈ ಕೆಳಕಂಡಂತೆ ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ.

"ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 2012, ದಿನಾಂಕ:21-04-2012 ಮತ್ತು ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 2012, ದಿನಾಂಕ:21-04-2012ರ ರೀತ್ಯಾ 6ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಪರಿಷ್ಕರಣೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಸದರಿ ಸರ್ಕಾರದ ಆದೇಶ ಕ್ರಮಸಂಖ್ಯೆ: 12.1ರಲ್ಲಿ ತಿಳಿಸಿರುವಂತೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ವೇತನ ಪರಿಷ್ಕರಣೆ ಬಗ್ಗೆ ಹೊರಡಿಸುವ ಆದೇಶ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ನಿರೀಕ್ಷಿಸಿ ಅಳವಡಿಸಿಕೊಳ್ಳಬಹುದಾಗಿದೆ. ವೇತನ ಪರಿಷ್ಕರಣೆಯ ಪಾವತಿಗೆ ಅಂದಾಜು ರೂ. 100.00 ಕೋಟಿಗಳು ಅವಶ್ಯವಿದ್ದು, 2012-13ರ ಕರಡು ಆಯವ್ಯಯದಲ್ಲಿ ಸದರಿ ಮೊತ್ತವನ್ನು ನಿಗಧಿಪಡಿಸಿಕೊಳ್ಳಲಾಗಿರುತ್ತದೆಂದು ತಿಳಿಸಿರುತ್ತಾರೆ"

ಆದ್ದರಿಂದ, ಸರ್ಕಾರದ ಆರ್ಥಿಕ ಇಲಾಖೆಯ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012, ದಿನಾಂಕ: 21-04-2012ರ ಆದೇಶ ಮತ್ತು ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್‌ಡಿ 07 ಎಸ್‌ಆರ್‌ಪಿ 2012, ದಿನಾಂಕ: 21-04-2012ರ ಅಧಿಸೂಚನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ತಾ॥ 05-05-2012ರ ಆಯುಕ್ತರ ಟಿಪ್ಪಣಿ ಒಪ್ಪಲಾಯಿತು.**

## *05]. ವಿಷಯದ ಸಂಖ್ಯೆ :-ತೆಆಸ್ಥಾಸ/44/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)67/11-12, ದಿನಾಂಕ : 25.04.2012 ರಲ್ಲಿ ವಿವರಿಸಿರುವಂತೆ, ಡಾ: ಅಶ್ವತ್ ನಾರಾಯಣ್ ಸಿ.ಎನ್. ಶಾಸಕರು ಮಲ್ಲೇಶ್ವರಂ ಕ್ಷೇತ್ರ, ರವರು ಪತ್ರ ಬರೆದು ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್ (ರಿ) ಸಂಗೀತ ಹಾಗೂ ವಾದ್ಯಗಳ ಕಲಿಕಾ ಸಂಸ್ಥೆ, ಅಮಿತಾಮೃತ ನಂ. 1667(9/2), 10ನೇ ಮುಖ್ಯರಸ್ತೆ, 'ಎ' ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು -10 ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಿ.ಕೆ. ಅನಂತರಾಮ್ ರವರು ಸಲ್ಲಿಸಿರುವ ಮನವಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್ (ರಿ) ಸಂಸ್ಥೆಯು ಕಳೆದ 12 ವರ್ಷಗಳಿಂದ ಶಾಸ್ತ್ರೀಯ ಸಂಗೀತದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಸಂಗೀತ ತರಬೇತಿ, ಕಮ್ಮಟಗಳು ಸೋದಾಹರಣ ಭಾಷಣಗಳು, ಸಂಗೀತ ಉತ್ಸವಗಳು, ಕರ್ನಾಟಕ ಸಂಗೀತಾಭಿರುಚಿಯನ್ನು ಜನಸಾಮಾನ್ಯರಲ್ಲಿ ಬೆಳೆಸಿ, ಮನೆಯಂಗಳದಲ್ಲಿ ಸಂಗೀತ ಸತ್ಸಂಗ ಮುಂತಾದ ಕಾರ್ಯಕ್ರಮಗಳನ್ನು ನಡೆಸಿ, ಸಂಗೀತ ಕ್ಷೇತ್ರದ ದಿಗ್ಗಜರನ್ನು ಸನ್ಮಾನಿಸುತ್ತಾ ಬಂದಿದ್ದು, ಸದರಿ ಸಂಸ್ಥೆಯು ಈಗ 3 ದಿನಗಳ – 13ನೇ ವಾರ್ಷಿಕೋತ್ಸವ ಹಾಗೂ ಕಾರ್ತಿಕ ಸಂಗೀತೋತ್ಸವ 2011 ನ್ನು ನಡೆಸಲು ತೀರ್ಮಾನಿಸಿದ್ದು, ಇದಕ್ಕೆ ಸುಮಾರು ರೂ. 8.00 ಲಕ್ಷಗಳು ತಗಲುವ ಸಾಧ್ಯತೆಯಿರುವುದಾಗಿ ಅಂದಾಜು ಪಟ್ಟಿ ಸಲ್ಲಿಸಿದ್ದಾರೆಂದು ತಿಳಿಸಿ, ಸಂಗೀತ ಕ್ಷೇತ್ರದಲ್ಲಿ ಮಹತ್ಸಾಧನೆ ಮಾಡಲು ಹೊರಟಿರುವ ಇವರ ಕಾರ್ಯವನ್ನು ಶ್ಲಾಘಿಸುವ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ನಿಧಿಯಿಂದ ಅನುದಾನ ಮಂಜೂರು ಮಾಡಲು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010-11 ನೇ ಸಾಲಿನಲ್ಲಿ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ಹಾಗೂ **ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನಗಳಿರುತ್ತವೆ.**

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ

ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12 ರಂತೆ 185 ಸಂಘ ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ.

ಈ ಪೈಕಿ **ಕ್ರ.ಸಂ. (111) ರಲ್ಲಿ "ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್ (ರಿ)"** ರವರಿಗೆ ನಿಗಧಿ ಪಡಿಸಲಾಗಿರುವ **ರೂ. 2.00 ಲಕ್ಷಗಳ** ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ದಿನಾಂಕ : 25-04-2012ರ ಆಯುಕ್ತರ ಟಿಪ್ಪಣಿ ಒಪ್ಪಿದೆ**

## ***06]. ವಿಷಯದ ಸಂಖ್ಯೆ :-ತೆಆಸ್ಥಾಸ/45/2012-13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಜಆ(ಕ)ಪಿಎಸ್ಆರ್(4)236/11-12, ದಿನಾಂಕ : 20.04.2012 ರಲ್ಲಿ ವಿವರಿಸಿರುವಂತೆ, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್ (ರಿ), ಆದಿ ಚುಂಚನಗಿರಿ ಇಂಗ್ಲೀಷ್ ಹೈಸ್ಕೂಲ್ ಕಟ್ಟಡ, 1ನೇ ಮಹಡಿ, ವಿಜಯನಗರ, ಬೆಂಗಳೂರು – 560 040. ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಗೆ ಪಾಲಿಕೆಯ ವತಿಯಿಂದ ಬೆಂಗಳೂರು ನಗರದ ಸಂಘ ಸಂಸ್ಥೆಗಳಿಗೆ ಸಹಾಯ ಧನ ನೀಡುವ ಯೋಜನೆಯಲ್ಲಿ ತಮ್ಮ ಟ್ರಸ್ಟ್ ಗೆ ರೂ. 1.00 ಲಕ್ಷ ರೂಪಾಯಿಗಳನ್ನು ಅನುದಾನ ಬಿಡುಗಡೆ ಮಾಡಿರುತ್ತದೆ. ಅದಕ್ಕಾಗಿ ಬಿ.ಬಿ.ಎಂ.ಪಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸಮಾಜದ ದುರ್ಬಲ ಹಾಗೂ ಬಡಜನರಿಗೆ ಸಂಪರ್ಕಕೊಂಡಿಯಾಗಿ ವಿವಿಧ ಜನಪರ ಸೇವೆಯಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು ಮಾಡಲು ಸಹಾಯಕಾರಿಯಾಗುತ್ತದೆ. ಆದ್ದರಿಂದ ತಮ್ಮ ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್‌ಗೆ ಮಂಜೂರಾಗಿರುವ ಒಂದು ಲಕ್ಷ ಅನುದಾನದ ಹಣವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, 2011-12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03-09-2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011-12ರಂತೆ 185 ಸಂಘ/ಸಂಸ್ಥೆಗಳಿಗೆ ರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (102) ರಲ್ಲಿ "ಕರ್ನಾಟಕ ರಾಜ್ಯ ಒಕ್ಕಲಿಗರ ಡೈರೆಕ್ಟರಿ ಟ್ರಸ್ಟ್ (ರಿ)"** ರವರಿಗೆ **ರೂ. 1.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಸದರಿಯವರ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಅಪರ ಆಯುಕ್ತರು (ಯೋಜನೆ) ರವರ ದಿನಾಂಕ : 20-04-2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ಆಯವ್ಯಯದಲ್ಲಿ ನಿಗಧಿಪಡಿಸಿರುವ ರೂ.1.00ಲಕ್ಷ (ಒಂದು ಲಕ್ಷ) ಅನುದಾನ ಬಿಡುಗಡೆ ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## ***07]. ವಿಷಯದ ಸಂಖ್ಯೆ :-ತೆಆಸ್ಥಾಸ/46/2012-13***

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಜಆ(ಕ)ಪಿಎಸ್ಆರ್(4)220/11-12, ದಿನಾಂಕ : 20.04.2012 ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಆರ್. ಧರ್ಮಪ್ಪ, ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ, ನಂ. 26, ರೆಡ್ ಕ್ರಾಸ್ ಭವನ, ಮೊದಲನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001 ರವರು ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯು ಒಂದು ಅಂತರ ರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು, ರಾಜ್ಯ ಶಾಖೆಯು ಕಳೆದ 9 ದಶಕಗಳಿಂದಲೂ ಹಲವಾರು

ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದು, ಆರೋಗ್ಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ನೀತಿಗಳನ್ನು ಅಳವಡಿಸಿಕೊಂಡು ಜನಾರೋಗ್ಯ ಉತ್ತಮಪಡಿಸಲು ಪ್ರಯತ್ನಿಸುತ್ತಿದೆ. ಪ್ರಕೃತಿ ವಿಕೋಪಗಳುಂಟಾದಾಗ ಸಂತ್ರಸ್ತರ ನೆರವಿಗೆ ಕೂಡಲೇ ಧಾವಿಸುತ್ತದೆಂದು 24 ಗಂಟೆಗಳ ಸೇವೆಯನ್ನು ಸಲ್ಲಿಸುತ್ತಿದ್ದು, ಸ್ವಯಂ ಪ್ರೇರಿತ ರಕ್ತದಾನಿಗಳಿಂದ ರಕ್ತವನ್ನು ಸಂಗ್ರಹಿಸಿ ರೋಗಿಗಳಿಗೆ ರಕ್ತ ಪೂರೈಸುವ ಮೂಲಕ ಸಾವಿರಾರು ಜನರ ಪ್ರಾಣ ಉಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿದೆಂದು ತಿಳಿಸಿ, 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿರುವುದಾಗಿ ತಿಳಿಸಿ, 2011–12 ನೇ ಸಾಲಿಗೆ ರೂ. 10.00 ಲಕ್ಷಗಳನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ 2010–11 ನೇ ಸಾಲಿನಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

2011–12 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 1,275.00 ಲಕ್ಷಗಳ ಪೈಕಿ, ದಿನಾಂಕ 03–09–2011 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 165/2011–12ರಂತೆ 185 ಸಂಘ/ಸಂಸ್ಥೆಗಳಿಗೆರೂ. 1,158.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ **ಕ್ರ.ಸಂ. (107) ರಲ್ಲಿ "ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ"** ರವರಿಗೆ **ರೂ. 5.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದ್ಯದ ಪಾಲಿಕೆಯ ಆರ್ಥಿಕ ಸ್ಥಿತಿ ಸುಸ್ಥಿತಿಯಲ್ಲಿಲ್ಲದೆ ಇರುವುದರಿಂದ ಪ್ರಸ್ತಾವಿತ ಸಂಸ್ಥೆಯ ಮನವಿಯ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಅಪರ ಆಯುಕ್ತರು (ಯೋಜನೆ) ಇವರ ದಿನಾಂಕ : 20–04–2012ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯದ ಸಂಖ್ಯೆ 37/2012–13 ದಿ॥. 17–04–2012ರ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದಂತೆ ಕ್ರಮವಹಿಸುವುದೆಂದು ತೀರ್ಮಾನಿಸಿತು.**

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/50/2012–13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಜ.ಆ(ಕ)ಪಿಎಸ್ಆರ್(4)215/11-12, ದಿನಾಂಕ : 14–05–2012 ರಲ್ಲಿ ವಿವರಿಸಿರುವಂತೆ, ಶ್ರೀಮತಿ ಇಂದಿರಾ ಎಸ್. ಎನ್, ಅಧ್ಯಕ್ಷರು ಶ್ರೀ ಧರ್ಮರಾಯಸ್ವಾಮಿ ದೇವಾಲಯ ವ್ಯವಸ್ಥಾಪನಾ ಸಮಿತಿ ತಿಗಳರಪೇಟೆ ಬೆಂಗಳೂರು – 560 002 ರವರು ಮನವಿ ಸಲ್ಲಿಸಿ, ಬೆಂಗಳೂರು ನಗರ ತಿಗಳರಪೇಟೆಯಲ್ಲಿ ನೆಲೆಸಿರುವ ಶ್ರೀ ಧರ್ಮರಾಯಸ್ವಾಮಿ ದೇವಾಸ್ಥಾನದಲ್ಲಿ ಅನಾದಿ ಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ "ಬೆಂಗಳೂರು ನಾಡಹಬ್ಬವಂದೇ" ಖ್ಯಾತಿ ಗೊಂಡಿರುವ ಕರಗ ಶಕ್ತ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಬೆಂಗಳೂರು ಮಹಾನಗರದ ಪಾಲಿಕೆಯು ಪ್ರತಿ ವರ್ಷವು ಅನುದಾನ ನೀಡುತ್ತಲಿದ್ದು ಕಳೆದ ಸಾಲಿನಲ್ಲಿ ನೀಡಲಾದ ಇಪ್ಪತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಸದ್ಬಳಕೆ ಮಾಡಿಕೊಂಡಿರುವ ಬಗ್ಗೆ ಆಡಿಟ್ಟಾದ ಲೆಕ್ಕ ಪತ್ರವನ್ನು ಮತ್ತು ದೃಢೀಕರಣ ಪತ್ರವನ್ನು ಲಗತ್ತಿಸುತ್ತಾ, 2012ನೇ ಸಾಲಿನ ಕರಗ ಶಕ್ತ್ಯೋತ್ಸದ ದಿನಾಂಕ: 29–03–2012 ರಿಂದ 08–04–2012 ರವರೆವಿಗೂ ನಡೆಯಲಿರುವುದರಿಂದ ಪೂರ್ವಸಿದ್ಧತೆಗಳಿಗಾಗಿ ಹಣ ಬೇಕಾಗಿರುವುದರಿಂದ ರೂ. 20,00,000–00 (ಇಪ್ಪತ್ತು ಲಕ್ಷ ರೂಪಾಯಿ) ಅತಿ ಶ್ರೀಘ್ರವಾಗಿ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸದರಿಯವರಿಗೆ ಪ್ರಸಕ್ತ 2011–12 ನೇ ಸಾಲಿನಲ್ಲಿ ಈಗಾಗಲೇ ರೂ. 20.00 ಲಕ್ಷಗಳನ್ನು (ಚೆಕ್ ನಂ. 405631 ದಿ: 15.04.2011 ರೂ. 10.00 ಲಕ್ಷ ಮತ್ತು ಚೆಕ್ ನಂ. 317774 ದಿ: 19.10.2011 ರೂ. 10.00 ಲಕ್ಷ) ಮಂಜೂರು ಮಾಡಲಾಗಿರುತ್ತದೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನಗಳಿರುತ್ತವೆ.

ಅದರಂತೆ, ಶ್ರೀ ಧರ್ಮರಾಯಸ್ವಾಮಿ ದೇವಾಲಯ ವ್ಯವಸ್ಥಾಪನಾ ಸಮಿತಿ ತಿಗಳರಪೇಟೆ ಬೆಂಗಳೂರು – 560 002 ರವರಿಗೆ ಕರಗ ಶಕ್ತ್ಯೋತ್ಸವ ಆಚರಣೆಗಾಗಿ ಘಟನೋತ್ತರ ಅನುಮೋದನೆಗೆ ಕಾಯ್ದಿರಿಸಿ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿಯವರು ಇನ್ನೂ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಅಪರ ಆಯುಕ್ತರು (ಯೋಜನೆ) ರವರ ದಿನಾಂಕ : 14-05-2012ರ ಟಿಪ್ಪಣಿಯನ್ನು ಒಪ್ಪುತ್ತಾ, ಘಟನೋತ್ತರ ಅನುಮೋದನೆಗೆ ಒಪ್ಪಿದೆ.**

***091. ವಿಷಯದ ಸಂಖ್ಯೆ :-ತೆಆಸ್ಥಾಸ/54/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(5ಜಿ)ಪಿಆರ್/206/2011-12, ದಿನಾಂಕ : 18.05.2012 ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 17 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ: 14-05-2012 ರ ಆದೇಶದಲ್ಲಿ ದಿನಾಂಕ: 01-01-2012 ರಿಂದ 31-03-2012 ರವರೆಗೆ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ಲಭ್ಯವಿರುವ ತುಟ್ಟಿ ಭತ್ಯೆ ದರವನ್ನು ಮೂಲ ವೇತನದ ಶೇಕಡ 69.5 ರಿಂದ ಶೇಕಡ 76.75 ಹೆಚ್ಚಿಸಿ ಮಂಜೂರಾತಿ ನೀಡಿರುತ್ತದೆ. ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 17 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ: 14-05-2012 ರ ಆದೇಶದಲ್ಲಿ ತಿಳಿಸಿರುವಂತೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ನಗದಾಗಿ ಮರು ಆದೇಶ ಹೊರಡಿಸುವವರೆಗೂ ಪಾವತಿಸಲು ಆದೇಶವಾಗಿರುತ್ತದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಅನುಕೂಲವಾಗುವಂತೆ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 17 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ: 14-05-2012 ರ ಸರ್ಕಾರಿ ಆದೇಶವನ್ನು ನಗರ ಪಾಲಿಕೆಯಲ್ಲಿ ತುಟ್ಟಿ ಭತ್ಯೆಯ ಹೆಚ್ಚುವರಿಯಾದ ಶೇಕಡ. 7.25ರ ವೆಚ್ಚವನ್ನು 2012-13ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ ಇತರೆ ಭತ್ಯೆಗಳ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಯವರ ವರದಿ ದಿನಾಂಕ: 18-05-2012 ರಂತೆ ಮುಖ್ಯ ಲೆಕ್ಕಾಧಿಕಾರಿಯವರು ಅಭಿಪ್ರಾಯ ವರದಿ ನೀಡಿರುತ್ತಾರೆ. (ಅಂದಾಜು ವೆಚ್ಚ ರೂ.75.ಲಕ್ಷಗಳು)

ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 17 ಎಸ್‌ಆರ್‌ಪಿ 2012, ಬೆಂಗಳೂರು, ದಿನಾಂಕ: 14-05-2012 ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ತಾ॥. 18-05-2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**